# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 903
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 18-12-2018

| | ಪ್ರಶ್ನೆ | ಉತ್ತರ |
|---|---|---|
| ಅ. | ದಕ್ಷಿಣ ಕನ್ನಡ ಜಿಲ್ಲೆಯ ಟ್ರಕ್ ಟರ್ಮಿನಲ್ (Truck Terminal) ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದ್ದರೂ ಇನ್ನು ಕಾರ್ಯಗತವಾಗದಿರಲು ಕಾರಣವೇನು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟ್ರಕ್ ಟರ್ಮಿನಲ್ / ವೇ ಸೈಡ್ ಅಮಿನಿಟೀಸ್ ನಿರ್ಮಿಸುವ ಸಲುವಾಗಿ ಮಂಗಳೂರಿನ ಸೂರತ್ಕಲ್ ಬಳಿಯಿರುವ ಮುಕ್ಕ ಸಸಿಹಿತ್ಲು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಜಮೀನನ್ನು ಗುರುತಿಸಲಾಗಿದ್ದು, ಸದರಿ ಜಮೀನನ್ನು ಭೂ-ಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಆ. | ಟ್ರಕ್ ಟರ್ಮಿನಲ್ ಇಲ್ಲದೆ ವಾಹನ ಅಪಘಾತ ಹೆಚ್ಚುತ್ತಿರುವುದು ಅಧಿಕಾರಿಗಳ ಗಮನದಲ್ಲಿದ್ದರೂ ಸರ್ಕಾರ ಯಾವುದೇ ಕ್ರಮ ವಹಿಸದೇ ಇರಲು ಕಾರಣವೇನು; | |
| ಇ. | ನಿಗದಿತ ಭಾರಕ್ಕಿಂತ ಹೆಚ್ಚು ಭಾರಗಳನ್ನು ಹೊತ್ತುಹೋಗುತ್ತಿರುವ ಟ್ರಕ್‌ಗಳ ಮೇಲೆ ಇಲಾಖೆ ಕ್ರಮ ವಹಿಸದೇ ಇರುವುದು ಅಪಘಾತಕ್ಕೆ ಕಾರಣ ಎಂಬ ವರದಿಗಳಿದ್ದು ಈ ಬಗ್ಗೆ ಇಲಾಖೆ ನಿರ್ಲಕ್ಷ್ಯ ವಹಿಸಲು ಕಾರಣವೇನು;(ವಿವರ ಒದಗಿಸುವುದು) | ನಿಗದಿತ ಭಾರಕ್ಕಿಂತ ಹೆಚ್ಚು ಭಾರದ ಸರಕು ಸಾಗಣೆ ಮಾಡುವ ವಾಹನಗಳ ವಿರುದ್ಧ ಸಾರಿಗೆ ಇಲಾಖೆಯಿಂದ ನಿರಂತರ ತಪಾಸಣಾ ಕಾರ್ಯ ಜಾರಿಯಲ್ಲಿದೆ.<br><br>ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 113 ಮತ್ತು 114ನ್ನು ಉಲ್ಲಂಘಿಸಿ ಅಧಿಕ ಭಾರದ ಸರಕು ಸಾಗಣೆ ಮಾಡುವ ಪ್ರಕರಣಗಳಲ್ಲಿ, ಕಾಯ್ದೆಯ ಕಲಂ 200ರ ಅಡಿಯಲ್ಲಿ ಹೆಚ್ಚುವರಿ ಭಾರದ ಸರಕು ಸಾಗಣೆ ವಾಹನಗಳಿಗೆ ದಂಡ ವಿಧಿಸಲಾಗುತ್ತಿದೆ. ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಸರಕು ಸಾಗಣೆ ಮಾಡುವ ವಾಹನಗಳ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಸಾರಿಗೆ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ತಪಾಸಣಾ ಕಾರ್ಯದ ವಿವರಗಳು ಈ ಕೆಳಕಂಡಂತಿವೆ:- |

| ವರ್ಷ | ತಪಾಸಿಸಿದ ವಾಹನಗಳು | ದಾಖಲಿಸಿದ ಪ್ರಕರಣಗಳು | ವಶಪಡಿಸಿಕೊಂಡ ವಾಹನಗಳು | ಅಧಿಕಭಾರ ಇಳಿಸಿದ ಪ್ರಕರಣಗಳು | ವಸೂಲಿಸಿದ ದಂಡ (ರೂ.ಗಳಲ್ಲಿ) |
|---|---|---|---|---|---|
| 2016-17 | 747754 | 7062 | 3745 | 6123 | 8,51,79,201.00 |
| 2017-18 | 962687 | 7451 | 4012 | 6630 | 9,88,87,436.00 |
| 2018-19 upto Oct. | 724395 | 5990 | 2319 | 3998 | 6,60,98,888.00 |

| | ಪ್ರಶ್ನೆ | ಉತ್ತರ |
|---|---|---|
| ಈ. | ಟ್ರಕ್ ಟರ್ಮಿನಲ್‌ಗೆ ಬೃಹತ್ ಕೈಗಾರಿಕೆಗಳು ಸ್ಥಳ ಒದಗಿಸದಿದ್ದರೂ ಸರ್ಕಾರ ಗಮನಹರಿಸದೆ ನಿರ್ಲಕ್ಷಿಸುತ್ತಿರುವುದರ ಬಗೆಗಿನ ದೂರುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | ಈ ಕುರಿತು ಪ್ರಶ್ನೆ 'ಅ' ರಲ್ಲಿ ಉತ್ತರಿಸಲಾಗಿದೆ. |

ಸಾಇ 189 ಸಾಸಂಪ್ರ 2018

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು